

## ಮುಧೋಳ ಶ್ವಾನ ಸಾಕಾಣಿಕೆ ಕುಸಿತ

ಮುಧೋಳ ಹೌಂಡ್ ಸಾಕಾಣಿಕೆಯೂ ನೂರಾರು ಕುಟುಂಬಗಳಿಗೆ ಉದ್ಯೋಗ ಒದಗಿಸಿವೆ. ಕುರಿ, ಕೋಳಿ ಸಾಕಾಣಿಕೆ ಮಾದರಿಯಲ್ಲಿಯೇ ಮುಧೋಳ ತಳಿಗಳನ್ನು ಸಾಕಿ, ಅವುಗಳ ಮರಿಗಳನ್ನು ಮಾರಾಟ ಮಾಡಲಾಗುತ್ತದೆ. ಮುಧೋಳ, ಲೋಕಾಪುರ, ಬಾಗಲಕೋಟೆ ಸೇರಿದಂತೆ ಮುಧೋಳ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಈಗಲೂ ಸಾಕಾಣಿಕೆ ಮಾಡುತ್ತಿದ್ದಾರೆ.

'ನಮ್ಮ ತಾತನ ಕಾಲದಿಂದಲೂ ಸಾಕುತ್ತಿದ್ದೇವೆ. 10 ನಾಯಿಗಳಿವೆ. 45 ದಿನಗಳ ಮರಿಯನ್ನು ಮಾರಾಟ ಮಾಡಲಾಗುತ್ತದೆ. ಈಗಲೂ ಬೇಡಿಕೆ ಚೆನ್ನಾಗಿದೆ' ಎಂದು ಹಲಗಲಿಯಲ್ಲಿ ಮುಧೋಳ ಶ್ವಾನ ಸಾಕುತ್ತಿರುವ ಬೆಣ್ಣಪ್ಪ ಕಟ್ಟಿ.

ಈ ಹಿಂದೆ ರಾಜ್ಯ ಸರ್ಕಾರವು ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ ಮುಧೋಳ ಶ್ವಾನಗಳ ಜೊತೆಗೆ ಅವುಗಳ ಸಾಕಾಣಿಕೆಗೆ ಆಹಾರ, ವೈಜ್ಞಾನಿಕ ತರಬೇತಿ, ಲಸಿಕೆ ನೀಡಲಾಗುತ್ತಿತ್ತು. ಈಗ ಯೋಜನೆ ನಿಂತಿರುವುದರಿಂದ ಸಾಕುವವರ ಸಂಖ್ಯೆಯಲ್ಲಿ ಕಡಿಮೆಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಎರಡು ಬಾರಿ 'ಮನ್ ಕಿ ಬಾತ್'ನಲ್ಲಿ ಪ್ರಸ್ತಾಪ ಮಾಡಿದ್ದರಾದರೂ, ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವಿಲ್ಲ. ಮರಿಗಳ ಮಾರಾಟದಿಂದ ಬಂದ ಹಣ, ಜೊತೆಗೆ ವಿಶ್ವವಿದ್ಯಾಲಯದ ನೆರವಿನಲ್ಲಿ ನಡೆಯುತ್ತಿದೆ. ಮುಖ್ಯಸ್ಥರನ್ನು ಹೊರತುಪಡಿಸಿದರೆ ಉಳಿದ ಸಿಬ್ಬಂದಿ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ.



ಪಡೆದಿರುವ ಈ ಶ್ವಾನಗಳದ್ದು ನೂರಾರು ವರ್ಷಗಳ ಇತಿಹಾಸ. ಛತ್ರಪತಿ ಶಿವಾಜಿ ಮಹಾರಾಜ ಯುದ್ಧದಲ್ಲಿ ಇವುಗಳನ್ನು ಬಳಸಿದ್ದಕ್ಕೆ ಉಲ್ಲೇಖವಿದೆ. ಮುಧೋಳ ಸಂಸ್ಥಾನದ ಘೋರ್ಪಡೆ ಮಹಾರಾಜರ ವಿಶೇಷ ಆಸಕ್ತಿಯ ಫಲವಾಗಿ ಇವು, ಮುಂಬೈ ಪ್ರಾಂತ್ಯದಾದ್ಯಂತ ಹರಡಿದವು. ಕ್ಯಾರವಾನ್ ಹೌಂಡ್, ಪಾಶ್ಮಿ ಹೌಂಡ್, ಮರಾಠ ಹೌಂಡ್, ಕಾಥೇವರ್ ನಾಯಿ ಎಂಬುವೆಲ್ಲಾ ಈ ಶ್ವಾನದ ಬೇರೆ ಬೇರೆ ಹೆಸರುಗಳು.

ಮುಧೋಳ ಹೌಂಡ್ ಮೂಲತಃ ಬೇಟೆನಾಯಿ. ಜೋತಾಡುವ ಕಿವಿಗಳ ಶಿಕಾರಿ ನಾಯಿಗಳನ್ನು 'ಹೌಂಡ್' ಎಂದು ಕರೆಯುವುದು ವಾಡಿಕೆ. ಸಪೂರ ಶರೀರದ, ಉದ್ದುದ್ದ ಕಾಲುಗಳನ್ನು ಹೊಂದಿದೆ. ವಯಸ್ಕ ಶ್ವಾನಗಳು 22ರಿಂದ 28 ಕೆ.ಜಿ. ಇರುತ್ತವೆ. ಬಾಲವು ಕೋಲಿನಂತಿರುತ್ತದೆ. ಗಂಟೆಗೆ ಐವತ್ತು ಕಿ.ಮೀ. ವೇಗದಲ್ಲಿ ಓಡಬಲ್ಲವು. ಉದ್ದನೆಯ ಮೂತಿಯಲ್ಲಿ ತಿವಿಯುವಂತಹ ಚುರುಕು ಕಂಗಳು. ಕಣ್ಣುಗಳ ಆಕಾರ ಮತ್ತು ಸ್ಥಾನದ ಕಾರಣ 270 ಡಿಗ್ರಿವರೆಗಿನ ದೃಷ್ಟಿಕೋನ ಹೊಂದಿರುವುದು ಈ ಶ್ವಾನಗಳ ವಿಶೇಷ. ಇದು ಮಾನವನ ದೃಷ್ಟಿ ವ್ಯಾಪ್ತಿಗಿಂತಲೂ ಎರಡು ಪಟ್ಟು ಅಧಿಕ. ಮಾಲೀಕನಿಗೆ ತುಂಬಾ ವಿಧೇಯವಾಗಿರುವ ಇವು ಅಪರಿಚಿತರನ್ನು ಗದರಿಸುತ್ತವೆ. ಜೀವಿತಾವಧಿ ಸರಾಸರಿ 13–14 ವರ್ಷಗಳು. ವರ್ಣ ವೈವಿಧ್ಯವೂ ಅಪಾರ. ಬಿಳಿ, ಕಪ್ಪು, ಕಂದು, ಕೆಂಪು, ಹಳದಿಯ ಜೊತೆಗೆ ಮಿಶ್ರ ಬಣ್ಣದ ನಾಯಿಗಳೂ ಇವೆ. ಬೇಟೆಯ ಜೊತೆಯಲ್ಲಿ ಮುಧೋಳ ಹೌಂಡ್ ಕಾವಲು, ರಕ್ಷಣೆಯ ಕೆಲಸಕ್ಕೂ ಸೈ. ಕಾಡುಮೃಗಗಳಿಂದ ಬೆಳೆ ರಕ್ಷಿಸಿಕೊಳ್ಳಲು, ಮನೆಗಾವಲಿಗಾಗಿಯೂ ರೈತರು ಸಾಕುತ್ತಾರೆ.

ಪ್ರಧಾನಿ ನರೇಂದ್ರ ಮೋದಿ 'ಮನ್ ಕಿ ಬಾತ್'ನಲ್ಲಿ ಪ್ರಧಾನಿ, ಮುಧೋಳ ಶ್ವಾನಗಳ ಗುಣಗಾನ ಮಾಡಿದ ಮೇಲೆ ತಳಿಯ ಜನಪ್ರಿಯತೆಯ ಗ್ರಾಫ್ ಹೆಚ್ಚಾಗಿದೆ. ಕಳೆದ ವಾರ ಮತ್ತೆ 'ಮನ್ ಕಿ ಬಾತ್'ನಲ್ಲಿ ಉಲ್ಲೇಖಿಸಿದ್ದಾರೆ. ವಿವಿಧ ಭದ್ರತಾ ಪಡೆಗಳಲ್ಲಿದ್ದ ವಿದೇಶಿ ತಳಿಗಳ ಜಾಗವನ್ನು ಈಗ ದೇಸಿ ತಳಿ ಮುಧೋಳ ಶ್ವಾನ ತುಂಬುತ್ತಿವೆ.

ಹಿಮಾಲಯನ್ ಶೀಪ್‌ಡಾಗ್, ರಾಜಪಾಳಯಂ, ರಾಂಪುರ್ ಗ್ರೇ ಹೌಂಡ್, ಕಣ್ಣಿಯಂತಹ ಹಲವು ದೇಸಿ ತಳಿಗಳು ತಮ್ಮ ವಿಶಿಷ್ಟ ಗುಣಲಕ್ಷಣಗಳಿಂದ ಗಮನ ಸೆಳೆದರೂ ಮುಧೋಳದ ಆಕರ್ಷಣೆ ಒಂದು ತೂಕ ಹೆಚ್ಚೇ!

ಈ ತಳಿಯ ಸಂರಕ್ಷಣೆ, ಅಭಿವೃದ್ಧಿ, ಸಂಶೋಧನೆ, ಸಾಕಾಣಿಕೆ ಮತ್ತು ತರಬೇತಿಗಾಗಿ ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಅಧೀನದಲ್ಲಿ ಮುಧೋಳ ಸಮೀಪದ ತಿಮ್ಮಾಪುರದಲ್ಲಿ 2009ರಲ್ಲಿ ಶ್ವಾನ ಸಂಶೋಧನೆ ಮತ್ತು ಮಾಹಿತಿ ಕೇಂದ್ರ ಸ್ಥಾಪನೆಯಾಗಿದೆ.

ಸೈನ್ಯದಲ್ಲಿ ಸ್ಫೋಟಕಗಳು, ರಹಸ್ಯ ಸುರಂಗಗಳ ಪತ್ತೆ, ಕಾವಲು, ವೈರಿಗಳ ಜಾಡು ಹಿಡಿಯಲು, ಪ್ರಾಕೃತಿಕ ವಿಕೋಪಗಳಲ್ಲಿ ಸಂತ್ರಸ್ತರ ಸುಳಿವಿಗಾಗಿ, ಮೃತದೇಹಗಳನ್ನು ಹುಡುಕಲು ಅಂತೆಲ್ಲಾ ವಿವಿಧ ಕಾರ್ಯಾಚರಣೆಗಳಿಗೆ ಶ್ವಾನಗಳನ್ನು ಬಳಸುತ್ತಾರೆ. ಎಂಥದ್ದೇ ವಿಷಮ ಪರಿಸ್ಥಿತಿಗೂ ಹೊಂದಿಕೊಳ್ಳುವ, ಅದ್ಭುತ ರೋಗನಿರೋಧಕ ಶಕ್ತಿಯಿರುವ, ವೇಗವಾಗಿ ಓಡುವ, ಉತ್ತಮ ವಾಸನಾಗ್ರಹಣ ಸಾಮರ್ಥ್ಯ ಹೊಂದಿರುವ, ಬುದ್ಧಿವಂತಿಕೆ ಮತ್ತು ಧೈರ್ಯದಲ್ಲಿ ಮುಂಚೂಣಿಯಲ್ಲಿವೆ.

'2009ರಲ್ಲಿ ಬೀದರನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ 40 ಎಕರೆ ಪ್ರದೇಶದಲ್ಲಿ ಈ ಕೇಂದ್ರ ಸ್ಥಾಪಿಸಲಾಗಿದೆ. ಸಂಶೋಧನಾ ಕೇಂದ್ರದಲ್ಲಿ ಸದ್ಯಕ್ಕೆ 40 ಶ್ವಾನಗಳಿವೆ. ಇಲ್ಲಿನ ಶ್ವಾನಗಳನ್ನೇ ದೇಶದ ವಿವಿಧ ರಕ್ಷಣಾ ಪಡೆಗಳು, ಇಲಾಖೆಗಳು ತೆಗೆದುಕೊಂಡು ಹೋಗುತ್ತಿವೆ. ಕೆಲವು ಸಲ ಮೊದಲೇ ಬುಕಿಂಗ್ ಮಾಡಿರುತ್ತಾರೆ' ಎನ್ನುತ್ತಾರೆ ಮುಧೋಳ ತಾಲ್ಲೂಕಿನ ತಿಮ್ಮಾಪುರದಲ್ಲಿರುವ ಮುಧೋಳ ಶ್ವಾನ ಸಂಶೋಧನೆ ಮತ್ತು ಮಾಹಿತಿ ಕೇಂದ್ರದ ಮುಖ್ಯಸ್ಥ ಶಿವಕುಮಾರ ಮುಕರ್ತಿಹಾಳ.

ರಾಜ್ಯದ ಯಾವುದೇ ಮೂಲೆಯಲ್ಲಿ ಶ್ವಾನಗಳ ಪ್ರದರ್ಶನ ನಡೆಯಲಿ. ಅಲ್ಲಿ ಮುಧೋಳದ ಶ್ವಾನ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುತ್ತದೆ. ರಾಜ್ಯದ ಹೊರಗಡೆ ನಡೆಯುವ ಪ್ರದರ್ಶನದಲ್ಲಿಯೂ ಇರುತ್ತದೆ. ■